ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 22-02-1990.

# *ಶಿವಜಯಂತಿಯ ಪ್ರಯುಕ್ತ ಅವ್ಯಕ್ತ ಬಾಪ್‌ದಾದಾರವರ ಮಹಾ ವಾಕ್ಯಗಳು.*

(शिव जयन्ति पर अव्यक्त बापदादा के महावाक्य)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ತ್ರಿಮೂರ್ತಿ ಶಿವತಂದೆಯ ಪ್ರತಿಯೊಂದು ಮಕ್ಕಳ ಮಸ್ತಕದಲ್ಲಿ ಮೂರು ತಿಲಕಗಳನ್ನು ನೋಡುತ್ತಿದ್ದೇವೆ. ಎಲ್ಲಾ ಮಕ್ಕಳ ಹೃದಯವು ಒಲವು-ಉತ್ಸಾಹದಿಂದ ತ್ರಿಮೂರ್ತಿ ಶಿವಜಯಂತಿಯನ್ನು ಆಚರಿಸುವುದಕ್ಕಾಗಿ ಬಂದಿದ್ದಾರೆ ಅಂದಮೇಲೆ ತ್ರಿಮೂರ್ತಿ ಶಿವತಂದೆ ಅಂದರೆ ಜ್ಯೋತಿಸ್ವರೂಪ ತಂದೆಯ ಮಕ್ಕಳ ಮಸ್ತಕದಲ್ಲಿ ಮೂರು ಬಿಂದುಗಳ ತಿಲಕವನ್ನು ನೋಡುತ್ತಾ ಹರ್ಷಿತವಾಗುತ್ತಿದ್ದಾರೆ. ಈ ತಿಲಕವು ಸಂಪೂರ್ಣ ಜ್ಞಾನದ ಸಾರವಾಗಿದೆ. ಈ ಮೂರು ಬಿಂದುಗಳಲ್ಲಿ ಸಂಪೂರ್ಣವಾಗಿ ಜ್ಞಾನ ಸಾಗರನ ಸಾರವು ಅಡಗಿಕೊಂಡಿದೆ. ಇಡೀ ಜ್ಞಾನದ ಸಾರವು ಮೂರು ಮಾತುಗಳಲ್ಲಿದೆ- ಪರಮಾತ್ಮ. ಆತ್ಮ ಹಾಗೂ ಡ್ರಾಮಾ ಅರ್ಥಾತ್ ರಚನೆ. ಇಂದು ನೆನಪಾರ್ಥ ದಿನವೂ ಸಹ ಶಿವ ಅರ್ಥಾತ್ ಬಿಂದುವಿನ ನೆನಪಾರ್ಥವಾಗಿದೆ. ತಂದೆಯೂ ಬಿಂದು, ತಾವೂ ಬಿಂದು ಹಾಗೂ ರಚನೆ ಅರ್ಥಾತ್ ಡ್ರಾಮಾ ಸಹ ಬಿಂದುವಾಗಿದೆ. ಹಾಗಾದರೆ ತಾವು ಬಂದುಗಳು ಬಿಂದುವಿನ(ಪರಮಾತ್ಮನ) ಜಯಂತಿಯನ್ನು ಆಚರಿಸುತ್ತಿದ್ದೀರಿ. ಬಿಂದುವಾಗಿ ಆಚರಿಸುತ್ತಿದ್ದೀರಿ ಅಲ್ಲವೆ! ಪ್ರಕೃತಿಯ ಪೂರ್ಣ ಆಟವು ಇವೆರಡು ಮಾತುಗಳಾಗಿವೆ- 1. ಬಿಂದು ಹಾಗೂ 2. ಲೈಟ್. ಜ್ಯೋತಿಯ ಆಟ. ತಂದೆಯು ಕೇವಲ ಬಿಂದುವಲ್ಲ ಆದರೆ ಜ್ಯೋತಿರ್ಬಿಂದುವೆಂದು ಹೇಳುತ್ತಾರೆ. ರಚಯಿತನೂ ಜ್ಯೋತಿರ್ಬಿಂದುವಾಗಿದ್ದಾರೆ ಮತ್ತು ತಾವೂ ಸಹ ಹೀರೊ ಪಾತ್ರಧಾರಿಗಳು ಜ್ಯೋತಿರ್ಬಿಂದು ಆಗಿದ್ದೀರಿ, ಕೇವಲ ಬಿಂದುವಾಗಿಲ್ಲ. ಹಾಗೂ ಇಡೀ ಆಟವನ್ನು ನೋಡಿರಿ. ಅದರಲ್ಲಿ ಯಾವುದೆಲ್ಲಾ ಕಾರ್ಯವನ್ನು ಮಾಡುತ್ತಾರೆ ಅದರ ಆಧಾರವು ಲೈಟ್ನದಾಗಿದೆ(ಆತ್ಮ). ಇಂದು ಪ್ರಪಂಚದಲ್ಲೇನಾದರೂ ಲೈಟ್ ಫೇಲ್ ಆಗಿಬಿಟ್ಟರೆ ಒಂದು ಸೆಕೆಂಡಿನಲ್ಲಿ ಪ್ರಪಂಚವು ಪ್ರಪಂಚವೆನಿಸುವುದಿಲ್ಲ. ಸುಖದ ಸಾಧನಗಳೇನಿವೆಯೋ ಅದೆಲ್ಲದರ ಆಧಾರವೇನಾಗಿದೆ? ಲೈಟ್. ಇಂದಿನ ನೆನಪಾರ್ಥ ದಿನವನ್ನು ವಿಶೇಷವಾಗಿ ನಿರಾಕಾರ ರೂಪದಿಂದ ಆಚರಿಸುತ್ತಾರೆ ಆದರೆ ತಾವು ಹೇಗೆ ಆಚರಿಸುವಿರಿ? ತಾವು ವಿಶೇಷ ಅತ್ಮರ ಆಚರಣೆಯೂ ವಿಶೇಷವಾಗಿದೆ ಅಲ್ಲವೆ! ನಾವಾತ್ಮರು ಇಷ್ಟು ಪದಮಾಪದಮ್ ಭಾಗ್ಯಶಾಲಿ ಆಗಿದ್ದೇವೆ, ಸಾಕಾರ ರೂಪದಲ್ಲಿ ಡೈರೆಕ್ಟ್ ತ್ರಿಮೂರ್ತಿ

ಶಿವತಂದೆಯ ಜೊತೆಯಲ್ಲಿ ಜಯಂತಿಯನ್ನು ಆಚರಿಸುತ್ತೇವೆ ಎಂದು ಎಂದಾದರೂ ಯೋಚಿಸಿದ್ದೀರಾ? ಎಂದಿಗೂ ಸ್ವಪ್ನದಲ್ಲಿಯೂ ಸಂಕಲ್ಪದಲ್ಲಿಯೂ ಇರಲಿಲ್ಲ. ಪ್ರಪಂಚದವರು ನೆನಪಾರ್ಥ ಚಿತ್ರದಿಂದ ಜಯಂತಿಯನ್ನು ಆಚರಿಸುತ್ತಾರೆ ಮತ್ತು ತಾವು ಚೈತನ್ಯದಲ್ಲಿ ತಂದೆಯನ್ನು ಆಹ್ವಾನ ಮಾಡಿ ಆಚರಿಸುತ್ತೀರಿ. ಅಂದಮೇಲೆ ಯಾರು ಶಕ್ತಿಶಾಲಿ ಆದರು? ತಂದೆಯವರೇ ಅಥವಾ ತಾವಾಗಿದ್ದೀರಾ? ತಂದೆಯು ಹೇಳುತ್ತಾರೆ- ಮೊದಲು ತಾವು ಒಂದುವೇಳೆ ಮಕ್ಕಳಿಲ್ಲದಿದ್ದರೆ ತಂದೆಯು ಬಂದೇನು ಮಾಡುವರು! ಆದ್ದರಿಂದ ಮೊದಲು ತಂದೆಯು ಮಕ್ಕಳಿಗೆ ಶುಭಾಷಯ ಕೊಡುತ್ತಾರೆ. ಮನಸ್ಸಿನ ಪ್ರೀತಿಯ ಶುಭಾಷಯಗಳು, ತಂದೆಯನ್ನು ಹೃದಯದಲ್ಲಿ ಪ್ರತ್ಯಕ್ಷ ಮಾಡಿಬಿಟ್ಟಿದ್ದೀರಿ ಅಂದಮೇಲೆ ಹೃದಯದಲ್ಲಿ ತಂದೆಯನ್ನು ಪ್ರತ್ಯಕ್ಷ ಮಾಡಿರುವುದಕ್ಕಾಗಿ ಶುಭಾಷಯಗಳು. ಜೊತೆಜೊತೆಗೆ ವಿಶ್ವದ ಸರ್ವ ಆತ್ಮರ ಪ್ರತಿ ದಯಾಹೃದಯಿ ಆಗಿದ್ದು ಕಲ್ಯಾಣಕಾರಿಯ ಶುಭಭಾವನೆ-ಶುಭಕಾಮನೆಯಿಂದ ತಂದೆಯನ್ನು ಪ್ರಪಂಚದ ಮುಂದೆ ಪ್ರತ್ಯಕ್ಷಗೊಳಿಸುವ ಸೇವೆಯ ಒಲವು-ಉತ್ಸಾಹಕ್ಕಾಗಿ ಶುಭಾಷಯಗಳು.

ಬಾಪ್‌ದಾದಾರವರು ಎಲ್ಲಾ ಮಕ್ಕಳ ಉತ್ಸಾಹದ ಉತ್ಸವವನ್ನು ನೋಡುತ್ತಿದ್ದರು. ಸೇವೆ ಮಾಡುವುದೆಂದರೆ ಅರ್ಥಾತ್ ಉತ್ಸಾಹದಿಂದ ಉತ್ಸವವನ್ನು ಆಚರಿಸುವುದಾಗಿದೆ. ಎಷ್ಟು ಬೇಹದ್ದಿನ ದೊಡ್ಡ ಸೇವೆಯನ್ನು ಮಾಡಿದ್ದೀರಿ ಅಷ್ಟೇ ಬೇಹದ್ದಿನ ಉತ್ಸವವನ್ನು ಆಚರಿಸುತ್ತೀರಿ. ಸೇವೆಯ ಅರ್ಥವೇನು? ಸೇವೆಯನ್ನು ಏಕೆ ಮಾಡುತ್ತೀರಿ? ಆತ್ಮರಲ್ಲಿ ತಂದೆಯ ಪರಿಚಯದ ಮೂಲಕ ಉತ್ಸಾಹವನ್ನು ಹೆಚ್ಚಿಸುವುದಕ್ಕಾಗಿ ಸೇವೆ ಮಾಡುತ್ತೀರಿ. ಯಾವಾಗ ಸೇವಾ ಯೋಜನೆ ಮಾಡುತ್ತೀರೋ ಆಗ ಇದೇ ಉತ್ಸಾಹವಿರುತ್ತದೆಯಲ್ಲವೆ- ಬೇಗ-ಬೇಗನೆ ವಂಚಿತರಾಗಿರುವ ಆತ್ಮರಿಗೆ ತಂದೆಯಿಂದ ಆಸ್ತಿ ಕೊಡಿಸೋಣ. ಆತ್ಮರಿಗೆ ಖುಷಿಯ ಹೊಳಪಿನ ಅನುಭವ ಮಾಡಿಸೋಣ. ಈಗ ಯಾವುದೇ ಆತ್ಮನನ್ನು ನೋಡುತ್ತೀರಿ. ಭಲೆ ವರ್ತಮಾನ ಪ್ರಪಂಚದಲ್ಲಿ ಎಷ್ಟೇ ದೊಡ್ಡವರೇ ಆಗಿರಲಿ ಆದರೆ ಪ್ರತಿಯೊಂದು ಆತ್ಮನನ್ನು ನೋಡುತ್ತಿದ್ದಂತೆಯೇ ಮೊದಲ ಸಂಕಲ್ಪವೇನು ಬರುತ್ತದೆ? ಇವರು ಪ್ರಧಾನ ಮಂತ್ರಿ. ಇವರು ರಾಜಾ ಎಂಬುದು ಕಾಣಿಸುತ್ತದೆಯೇ ಅಥವಾ ಆತ್ಮನೊಂದಿಗೆ ಭೇಟಿಯಾಗುತ್ತೀರಾ ಅಥವಾ ನೋಡುತ್ತೀರಾ? ಈ ಆತ್ಮವೂ ಸಹ ತಂದೆಯಿಂದ ಪ್ರಾಪ್ತಿಯ ಹನಿಯನ್ನು ತೆಗೆದುಕೊಂಡುಬಿಡಲಿ ಎಂಬ ಶುಭಭಾವನೆಯು ಬರುತ್ತದೆಯಲ್ಲವೆ. ಇದೇ ಸಂಕಲ್ಪದಿಂದ ಭೇಟಿಯಾಗುವಿರಲ್ಲವೆ. ಈಗ ಈ ಶುಭಭಾವನೆಯು ಉತ್ಪನ್ನವಾದಾಗಲೇ ಅದರ ಫಲವು ಆ ಆತ್ಮನಿಗೆ ಅನುಭವ ಮಾಡುವ ಶಕ್ತಿಯು ಸಿಗುವುದು. ಶುಭಭಾವನೆ ತಮ್ಮದಾಗಿದೆ ಆದರೆ ತಮ್ಮ ಭಾವನೆಯ ಫಲವು ಅವರಿಗೆ ಸಿಗುತ್ತದೆ ಏಕೆಂದರೆ ತಾವು ಶ್ರೇಷ್ಠಾತ್ಮರ ಶುಭ ಭಾವನೆಯ ಸಂಕಲ್ಪದಲ್ಲಿ ಬಹಳ ಶಕ್ತಿಯಿದೆ. ತಾವು ಒಬ್ಬೊಬ್ಬ ಶ್ರೇಷ್ಠಾತ್ಮರ ಒಂದೊಂದು ಶುಭಸಂಕಲ್ಪವು ವಾಯುಮಂಡಲದ ಸೃಷ್ಟಿಯ ರಚಯಿತರಾಗಿದ್ದೀರಿ. ಸಂಕಲ್ಪದಿಂದ ಸೃಷ್ಟಿಯೆಂದು ಹೇಳುವರಲ್ಲವೆ! ನಾಲ್ಕೂ ಕಡೆಯ ವಾತಾವರಣವು ಈ ಶುಭಭಾವನೆಯ ಶುಭಸಂಕಲ್ಪ ಅರ್ಥಾತ್ ಸೃಷ್ಟಿಯನ್ನೇ ಪರಿವರ್ತನೆ ಮಾಡಿಬಿಡುತ್ತದೆ ಆದ್ದರಿಂದ ಬರುವಂತಹ ಆತ್ಮರೆಲ್ಲರಿಗೂ ಏನಾದರೊಂದು ಒಳ್ಳೆಯ ಅನುಭವವಾಗುವುದು, ಭಿನ್ನವಾದ ಪ್ರಪಂಚವೆಂದು ಅನುಭವವಾಗುವುದು. ಸ್ವಲ್ಪ ಸಮಯಕ್ಕಾಗಿ ತಮ್ಮ ಶುಭ ಸಂಕಲ್ಪದ ಭಾವನೆಯ ಫಲದಲ್ಲಿಯೇ ಅವರು ತಿಳಿಯುತ್ತಾರೆ- ಇದು ಭಿನ್ನ ಹಾಗೂ ಪ್ರಿಯವಾದ ಸ್ಥಾನವಾಗಿದೆ. ಭಿನ್ನ ಹಾಗೂ ಪ್ರಿಯವಾದ ಫರಿಶ್ತಾ ಆತ್ಮರಿದ್ದಾರೆ. ಎಂತಹ ಆತ್ಮವೇ ಇರಬಹುದು ಆದರೆ ಸ್ವಲ್ಪ ಸಮಯಕ್ಕಾಗಿ ಉತ್ಸಾಹದಲ್ಲಿ ಬಂದುಬಿಡುತ್ತಾರೆ. ಸೇವೆಯ ಅರ್ಥವೇನಾಯಿತು? ಉತ್ಸವವನ್ನು ಆಚರಿಸುವುದು ಅರ್ಥಾತ್ ಉತ್ಸಾಹದಲ್ಲಿ ತರುವುದು. ಯಾರೆಂತಹ ಸ್ಥೂಲ ಕರ್ಮವನ್ನೇ ಮಾಡುತ್ತೀರಿ, ಭಲೆ ವಾಣಿಯ ಮೂಲಕ ಅಥವಾ ಸಂಕಲ್ಪ, ಪ್ರತೀ ಮಾತೂ ಉತ್ಸವವಾಗಿದೆ ಏಕೆಂದರೆ ಉತ್ಸಾಹದಿಂದ ಮಾಡುತ್ತೀರಿ ಹಾಗೂ ಉತ್ಸಾಹವನ್ನು ಕೊಡುತ್ತೀರಿ. ಈ ಸ್ಥಿತಿಯಿಂದ ಎಂದಿಗೂ ಸುಸ್ತು ಅಥವಾ ಹೊರೆಯೆನಿಸುವುದಿಲ್ಲ. ತಲೆ ಬಾರವಾಗುವುದಿಲ್ಲ, ಹೃದಯ ವಿಧೀರ್ಣರಾಗುವುದಿಲ್ಲ. ಯಾರಿಗಾದರೂ ಯಾವಾಗಲಾದರೂ ಸುಸ್ತಾಗುತ್ತದೆ ಅಥವಾ ಮನಸ್ಸು ಖಿನ್ನತೆಗೊಳಗಾದಾಗ ಪ್ರಪಂಚದಲ್ಲಿ ಏನು ಮಾಡುತ್ತಾರೆ. ಯಾವುದಾದರೂ ಮನೋರಂಜನೆಯ ಸ್ಥಾನದಲ್ಲಿ ಹೊರಟುಹೋಗುತ್ತಾರೆ. ಹೇಳುತ್ತಾರೆ- ಇಂದು ಬಹಳ ಹೊರೆಯೆನಿಸುತ್ತಿದೆ ಆದ್ದರಿಂದ ಸ್ವಲ್ಪ ಮನೋರಂಜನೆ ಬೇಕು. ಉತ್ಸವದ ಅರ್ಥವೇ ಆಗಿದೆ- ಮೋಜನ್ನಾಚರಿಸುವುದು. ತಿನ್ನಿರಿ-ಪಾನೀಯ ಸ್ವೀಕರಿಸಿರಿ, ಮೋಜನ್ನು ಆಚರಿಸುವುದೇ ಉತ್ಸವವಾಗಿದೆ. ಬ್ರಾಹ್ಮಣರಿಗಂತೂ ಪ್ರತೀ

ಕ್ಷಣವೂ ಉತ್ಸವವಾಗಿದೆ. ಪ್ರತೀ ಕರ್ಮವೂ ಉತ್ಸವವಾಗಿದೆ. ಇದನ್ನು ಆಚರಿಸುವುದರಲ್ಲಿ ಸುಸ್ತಾಗುವುದೇ? ಮಧುಬನದಲ್ಲಿ ಮನೋರಂಜನೆಯ ಕಾರ್ಯವನ್ನು ಮಾಡುತ್ತೀರಿ, ಆಗ ಭಲೆ 11 ಗಂಟೆಯಾದರೂ ಕುಳಿತಿರುತ್ತೀರಿ. ಒಂದುವೇಳೆ ಕ್ಲಾಸ್ 11 ಗಂಟೆಯವರೆಗೆ ಆಗುತ್ತಿದೆಯೆಂದರೆ ಅರ್ಧ ಕ್ಲಾಸಿನಲ್ಲಿಯೇ ನಿದ್ದೆಮಾಡುತ್ತಾರೆ. ಮನೋರಂಜನೆ ಪ್ರಿಯವಾಗುತ್ತದೆ ಅಲ್ಲವೇ? ಅಂದಮೇಲೆ ಸೇವೆಯೂ ಉತ್ಸವವಾಗಿದೆ ಎಂಬ ವಿಧಿಯಿಂದ ಸೇವೆ ಮಾಡಿರಿ, ಸ್ವಯಂ ತಾವೂ ಉತ್ಸಾಹದಲ್ಲಿರಿ. ಸೇವೆಯನ್ನೂ ಉತ್ಸಾಹದಿಂದ ಮಾಡಿರಿ ಹಾಗೂ ಆತ್ಮರಲ್ಲಿಯೂ ಉತ್ಸಾಹವನ್ನು ತಂದರೆ ಏನಾಗುವುದು? ಯಾವುದೇ ಸೇವೆ ಮಾಡಬಹುದು ಅದರ ಮೂಲಕ ಆತ್ಮರಲಿಯೂ ಉತ್ಸಾಹ ಹೆಚ್ಚಾಗುತ್ತಿರುತ್ತದೆ. ಇಂತಹ ಉತ್ಸಾಹವಿದೆಯೇ? ಅಥವಾ ಕೇವಲ ಮಧುಬನದಲ್ಲಿ ಇರುವಷ್ಟು ಸಮಯದಲ್ಲಿ ಇರುತ್ತದೆಯೇ? ಇಲ್ಲಿಂದ ಹೋದರೆ ಮತ್ತೆ ಸಂದರ್ಭಗಳು ಕಂಡುಬರುತ್ತದೆಯೇ? ಉತ್ಸಾಹವು ಎಂತಹ ವಸ್ತುವಾಗಿದೆ ಎಂದರೆ ಅದರ ಮುಂದೆ ಯಾವುದೇ ಪರಿಸ್ಥಿತಿಯೂ ಇರುವುದಿಲ್ಲ. ಯಾವಾಗ ಆ ಉತ್ಸಾಹವು ಕಡಿಮೆಯಾಗುತ್ತದೆಯೋ ಆಗ ಪರಿಸ್ಥಿತಿಯು ಯುದ್ಧ ಮಾಡುತ್ತದೆ. ಉತ್ಸಾಹವಿದ್ದರೆ ಪರಿಸ್ಥಿತಿಯು ಯುದ್ಧ ಮಾಡುವುದಿಲ್ಲ. ತಮ್ಮ ಮೇಲೆ ಬಲಿಹಾರಿ ಆಗಿಬಿಡುತ್ತದೆ.

ಇಂದು ಉತ್ಸವವನ್ನು ಆಚರಿಸಲು ಬಂದಿದ್ದೀರಲ್ಲವೆ. ಶಿವಜಯಂತಿಯ ಉತ್ಸವ ಎಂದು ಹೇಳುತ್ತಾರೆ. ಆದರೆ ಅದನ್ನು ಆಚರಿಸಲು ಬಂದಿಲ್ಲ ಏಕೆಂದರೆ ಪ್ರತೀ ಗಳಿಗೆಯೂ ಉತ್ಸವವಾಗಿದೆ- ಇದನ್ನು ಅಂಡರ್‌ಲೈನ್ ಮಾಡಲು ಬಂದಿದ್ದೀರಿ. ಭಲೆ ಶರೀರದಲ್ಲಿ ಶಕ್ತಿಯಿಲ್ಲ ಅಥವಾ ಧನ ಶಕ್ತಿಯ ಕೊರತೆಯಿರುವ ಕಾರಣ ಇದಾಗಲು ಸಾಧ್ಯವಿಲ್ಲ ಎಂದು ಮನಸ್ಸಿನಲ್ಲಿ ಫೀಲ್ ಆಗುತ್ತದೆ ಆದರೆ ಉತ್ಸಾಹವು ಅಂತಹ ವಸ್ತುವಾಗಿದೆ. ಅದೇನಾದರೂ ತಮ್ಮಲ್ಲಿದ್ದರೆ ಅನ್ಯರನ್ನೂ ಉತ್ಸಾಹದಲ್ಲಿ ಮುಂದುವರೆಸುತ್ತಾ ತಮ್ಮ ಸಹಯೋಗಿಯನ್ನಾಗಿ ಮಾಡಿಬಿಡಬಹುದು. ಧನದ ಕೊರತೆಯಿದ್ದರೂ ಸಹ ಉತ್ಸಾಹವು ಎಲ್ಲಿಂದಾದರೂ ಆ ಧನವನ್ನೂ ಸೆಳೆಯುತ್ತಾ ತಂದುಬಿಡುತ್ತದೆ. ಉತ್ಸಾಹವು ಅಂತಹ ಅಯಸ್ಕಾಂತವಾಗಿದೆ. ಅದು ಹಣವನ್ನೂ ಸೆಳೆದುಕೊಂಡು ತರುತ್ತದೆ. ಹೇಗೆ ಭಕ್ತಿಯಲ್ಲಿ ಹೇಳುವರಲ್ಲವೆ- ಸಾಹಸ, ಉತ್ಸಾಹವು ಮಣ್ಣನ್ನೂ ಧನವನ್ನಾಗಿ ಮಾಡಿಬಿಡುತ್ತದೆ. ಈ ರೀತಿಯಾಗಿ ಪರಿವರ್ತನೆಯಾಗಿಬಿಡುತ್ತದೆ! ಅಂದಮೇಲೆ ಉತ್ಸಾಹವು ಅಂತಹ ಅನುಭೂತಿಯಾಗಿದೆ, ಅವರ ಮೇಲೆ ಯಾವುದೇ ಆತ್ಮನ ಬಲಹೀನತೆಯ ಸಂಸ್ಕಾರದ ಪ್ರಭಾವು ಬೀರಲು ಸಾಧ್ಯವಿಲ್ಲ. ತಮ್ಮ ಪ್ರಭಾವವೇ ಅವರ ಮೇಲೆ ಬೀರುವುದು, ಅವರ ಪ್ರಭಾವವು ತಮ್ಮಮೇಲೆ ಬೀರುವುದಿಲ್ಲ. ಯಾವುದು ಸ್ವಪ್ನ ಸಂಕಲ್ಪದಲ್ಲಿಯೂ ಇರುವುದಿಲ್ಲವೋ ಅದು ಸಹಜವಾಗಿ ಸಾಕಾರವಾಗಿಬಿಡುವುದು- ಇದು ಬಾಪ್‌ದಾದಾರವರಿಂದ ಎಲ್ಲಾ ಸೇವಾಧಾರಿಗಳಿಗೂ ಗ್ಯಾರಂಟಿಯ ವರದಾನವಾಗಿದೆ.

ಬಾಪ್‌ದಾದಾ ಖುಷಿಯಾಗಿದ್ದಾರೆ. ಒಳ್ಳೆಯ ಲಗನ್ನಿನ ಸೇವೆಯ ಯೋಜನೆಗಳನ್ನು ಮಾಡುತ್ತಿದ್ದೀರಿ. ಸಂಸ್ಕಾರಗಳನ್ನು ಮಿಲನ ಮಾಡಿಸುವುದು ಅರ್ಥಾತ್ ಸಂಪೂರ್ಣತೆಯನ್ನು ಸಮೀಪ ತರುವುದು ಮತ್ತು ಸಮಯವನ್ನು ಸಮೀಪ ತರುವುದು. ಬಾಪ್ ದಾದಾರವರೂ ನೋಡುತ್ತಿದ್ದಾರೆ- ಸಂಸ್ಕಾರ ಮಿಲನದ ರಾಸ್ ಚೆನ್ನಾಗಿ ಮಾಡುತ್ತಿದ್ದಿರಿ. ಬಹಳ ಒಳ್ಳೆಯ ಸುಗಂಧವು ಬರುತ್ತಿತ್ತು! ಅಂದಮೇಲೆ ಸದಾಕಾಲ ಹೇಗಿರಬೇಕು? ಉತ್ಸವವನ್ನು ಆಚರಿಸಬೇಕು. ಉತ್ಸಾಹದಲ್ಲಿ ಇರಬೇಕಾಗಿದೆ. ಸ್ವಯಂ ತಾವು ಮಾಡಲು ಸಾಧ್ಯವಿಲ್ಲವೆಂದರೆ ಅನ್ಯರಿಗೆ ಉತ್ಸಾಹ ತರಿಸುತ್ತೀರೆಂದರೆ, ಅನ್ಯರ ಉತ್ಸಾಹವು ತಮ್ಮನ್ನೂ ಉತ್ಸಾಹದಲ್ಲಿ ತರುತ್ತದೆ. ನಿಮಿತ್ತರಾಗಿರುವ ಹಿರಿಯರು ಇದೇ ಕಾರ್ಯ ಮಾಡುವರಲ್ಲವೆ. ಅನ್ಯರಿಗೆ ಉತ್ಸಾಹ ತರಿಸುವುದು ಅರ್ಥಾತ್ ಸ್ವಯಂನ್ನು ಉತ್ಸಾಹದಲ್ಲಿ ತರುವುದು ಕೆಲವೊಮ್ಮೆ 14 ಆಣೆಯಷ್ಟು ಉತ್ಸಾಹವಿದ್ದರೆ, ಅನ್ಯರಿಗೆ 16 ಆಣೆಯಷ್ಟು ಉತ್ಸಾಹವನ್ನು ತರಿಸುತ್ತೀರೆಂದರೆ. ಅದರಿಂದ ತಮಗೂ 2 ಆಣೆಯಷ್ಟು ಉತ್ಸಾಹವು ಹೆಚ್ಚಾಗುವುದು. ಬ್ರಹ್ಮಾತಂದೆಯ ವಿಶೇಷತೆ ಏನಾಗಿತ್ತು? ಕಲ್ಲಿದ್ದಲನ್ನು ಹೊರ ಬೇಕಾದರೂ ಉತ್ಸಾಹದಿಂದ ಮನೋರಂಜನೆಯಿಂದ ಹೋರುತ್ತಿದ್ದರು. (ಕಲ್ಲಿದ್ದಲಿನ 35 ಭೋಗಿಗಳಿರುವ ಗೂಡ್ಸ್ ಗಾಡಿ ಬರಬೇಕಿತ್ತು. ಬಾಪ್ ದಾದಾರವರು ಕಲ್ಲದ್ದಲಿನ ಬಗ್ಗೆ ಮಾತನಾಡುತ್ತಿದ್ದರು ಮತ್ತೆ ಸ್ವಲ್ಪವೇ ಸಮಯದ ನಂತರ ಸಮಾಚಾರ ಸಿಕ್ಕಿತು- ಅಬುರೋಡ್ ನಲ್ಲಿ ಕಲ್ಲಿದ್ದಲಿನ ಗೂಡ್ಸ್ ಗಾಡಿ ತಲುಪಿದೆ) ಒಳ್ಳೆಯದು!

ಪಾಂಡವರೆಲ್ಲರೂ ಏನು ಮಾಡುವಿರಿ? ಸದಾ ಉತ್ಸಾಹದಲ್ಲಿ ಇರುವಿರಲ್ಲವೆ. ಉತ್ಸಾಹವನ್ನೆಂದಿಗೂ ಬಿಡಬಾರದು. ಈಗಿನ ಉತ್ಸಾಹದಿಂದ ತಮ್ಮ ಜಡಚಿತ್ರಗಳ ಮುಂದೆ ಹೋಗಿ ಮೊದಲು ಉತ್ಸಾಹ- ಧೈರ್ಯವನ್ನು ತೆಗೆದುಕೊಂಡ ನಂತರ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಇಷ್ಟು ಉತ್ಸಾಹವು ತುಂಬಿರುವ ಆತ್ಮರಾಗಿದ್ದೀರಿ ಆದ್ದರಿಂದ ತಮ್ಮ ಜಡಚಿತ್ರಗಳೂ ಸಹ ಅನ್ಯರಿಗೆ ಉತ್ಸಾಹ-ಸಾಹಸ(ಧೈರ್ಯ)ವನ್ನು ಕೊಡುತ್ತಿದೆ! ಪಾಂಡವರ ಮಹಾವೀರನ ಚಿತ್ರವು ಎಷ್ಟೊಂದು ಪ್ರಸಿದ್ಧವಿದೆ! ಬಲಹೀನರು ಶಕ್ತಿ ಪಡೆಯುವುದಕ್ಕಾಗಿ ಮಹಾವೀರನ ಬಳಿ ಹೋಗುತ್ತಾರೆ! ಒಳ್ಳೆಯದು-

**ನಾಲ್ಕಾರು ಕಡೆಯಲ್ಲಿರುವ ಎಲ್ಲಾ ಅತ್ಯಂತ ಶ್ರೇಷ್ಠಾತ್ಮರಿಗೆ, ಸದಾ ಜ್ಯೋತಿರ್ಬಿಂದುವಾಗಿ ಜ್ಯೋತಿರ್ಬಿಂದು ಆತ್ಮನನ್ನು ಪ್ರತ್ಯಕ್ಷಗೊಳಿಸುವ ಒಲವು-ಉತ್ಸಾಹದಲ್ಲಿರುವ, ಸದಾ ಹೃದಯದಲ್ಲಿ ತಂದೆಯ ಪ್ರತ್ಯಕ್ಷತೆಯ ಧ್ವಜಾರೋಹಣ ಮಾಡುವಂತಹ ಮಕ್ಕಳಿಗೆ, ಸದಾ ವಿಶ್ವದಲ್ಲಿ ತಂದೆಯ ಪ್ರತ್ಯಕ್ಷತೆಯ ಧ್ವಜಾರೋಹಣ ಮಾಡುವಂತಹ ಮಕ್ಕಳಿಗೆ, ವಜ್ರಸಮಾನ ತಂದೆಯ ಜಯಂತಿಯಿಂದ ಮಕ್ಕಳ ಜಯಂತಿ, ಇದಕ್ಕಾಗಿ ಶುಭಾಷಯಗಳು, ಸದಾ ಶುಭಾಷಯಗಳಿಂದ ಹಾರುವವರು ಹಾಗೂ ಸದಾ ಹೀಗೆಯೇ ಇರುವಿರಿ. ಇಂತಹ ಉತ್ಸಾಹದಲ್ಲಿರುವವರು, ಪ್ರತೀ ಸಮಯವೂ ಉತ್ಸವವನ್ನು ಆಚರಿಸುವವರು ಹಾಗೂ ಸರ್ವರಿಗೂ ಉತ್ಸಾಹ ತರಿಸುವವರು, ಮಹಾನ್ ಶಕ್ತಿಶಾಲಿ ಆತ್ಮರಿಗೆ ತ್ರಿಮೂರ್ತಿ ಶಿವತಂದೆಯ ನೆನಪು-ಪ್ರೀತಿ, ಶುಭಾಷಯಗಳು ಹಾಗೂ ನಮಸ್ತೆ.**

**ಡಬಲ್ ವಿದೇಶಿ ಸಹೋದರ-ಸಹೋದರಿಯರ ಗ್ರೂಪ್‌ನೊಂದಿಗೆ ವಾರ್ತಾಲಾಪ:-**

ತಂದೆ ಹಾಗೂ ಮಕ್ಕಳ ಸಂಬಂಧವು ಅತ್ಯಂತ ಹೃದಯದ ಸೂಕ್ಷ್ಮ ಸಂಬಂಧವಿದೆ. ಯಾರೂ ಸಹ ಬೇರ್ಪಡಿಸಲು ಶಕ್ತಿಯೇ ಇಲ್ಲ. ಮಕ್ಕಳಲ್ಲಿ ಸದಾ ಇದೇ ಅತ್ಯಂತ ನಶೆಯಿರುತ್ತದೆ- ಪ್ರಪಂಚದವರು ತಂದೆಯನ್ನು ನೆನಪು ಮಾಡುತ್ತಾರೆ ಆದರೆ ತಂದೆಯು ಯಾರನ್ನು ನೆನಪು ಮಾಡುತ್ತಾರೆ! ತಂದೆಯನ್ನಂತು ಆತ್ಮರಷ್ಟೇ ನೆನಪು ಮಾಡುತ್ತಾರೆ ಆದರೆ ತಾವು ಆತ್ಮರನ್ನು ಯಾರು ನೆನಪು ಮಾಡುತ್ತಾರೆ! ಎಷ್ಟು ಶ್ರೇಷ್ಠವಾದ ನಶೆಯಾಗಿದೆ! ಈ ನಶೆ ಸದಾ ಇರುತ್ತದೆಯೇ? ಹೆಚ್ಚು ಕಡಿಮೆ ಆಗುವುದಿಲ್ಲವೇ? ಕೆಲವೊಮ್ಮೆ ಹಾರುತ್ತಾ, ಕೆಲವೊಮ್ಮೆ ಏರುತ್ತಾ, ಕೆಲವೊಮ್ಮೆ ನಡೆಯುತ್ತಾ..... ಇರುವುದಿಲ್ಲವೇ? ಹಿಂದೆ ಸರಿಯುವವರಲ್ಲ, ನಿಲ್ಲುವವರೂ ಅಲ್ಲ ಆದರೆ ತೀವ್ರ ಪರಿವರ್ತನೆ ಆಗಿಬಿಡುತ್ತದೆ. ಬಾಪ್ ದಾದಾರವರು ಸದಾ ಮಕ್ಕಳ ಇದೇ ಆಟವನ್ನು ನೋಡುತ್ತಿರುತ್ತಾರೆ- ಕೆಲವೊಮ್ಮೆ ನಡೆಯಲು ಪ್ರಾರಂಭಿಸುತ್ತಾರೆ. ಮತ್ತೇನಾಗುವುದು? ಯಾವುದಾದರೊಂದು ಅಂತಹ ಸಂದರ್ಭವುಂಟಾಗುತ್ತದೆ, ಆಗ ಯಾರಾದರೂ ಮುಂದೆ ತಳ್ಳಿದರಷ್ಟೇ ನಡೆಯುತ್ತಾರೆ. ಈ ರೀತಿ ಡ್ರಾಮಾ ಅನುಸಾರ ಯಾವುದಾದರೊಂದು ಮಾತಾಗುತ್ತದೆ, ಅದು ಮತ್ತೆ ಹಾರುವ ಕಲೆಯ ಕಡೆಗೆ ಕರೆದುಕೊಂಡು ಹೋಗುತ್ತದೆ ಏಕೆಂದರೆ ಡ್ರಾಮಾನುಸಾರ ಪರಿಪಕ್ವ, ನಿಶ್ಚಯಬುದ್ಧಿಯಿದ್ದಾರೆ. ಹೃದಯದಲ್ಲಿ ಈ ಸಂಕಲ್ಪವನ್ನು ತೆಗೆದುಕೊಂಡಿದ್ದಾರೆ- ತಂದೆ ನನ್ನವರು, ನಾನು ಬಾಬಾರವನು. ಅಂದಮೇಲೆ ಇಂತಹ ಆತ್ಮರಿಗೆ ಸ್ವತಹವಾಗಿಯೇ ಸಹಯೋಗ ಸಿಕ್ಕಿಬಿಡುವುದು. ಸಹಯೋಗ ಸಿಗುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ? (ಸೆಕೆಂಡ್) ನೋಡಿ, ಫೋಟೊ ತೆಗೆದುಕೊಳ್ಳಲಾಗುತ್ತಿದೆ. ತಂದೆಯ ಕ್ಯಾಮರಾ ಸೆಕೆಂಡಿನಲ್ಲಿ ಎಲ್ಲಾ ಚಿತ್ರಗಳನ್ನು ಸೆರೆ ಹಿಡಿಯುತ್ತದೆ. ಏನಾದರೂ ಆಗಲಿ ಆದರೆ ತಂದೆ ಹಾಗೂ ಸೇವೆಯಿಂದ ಎಂದಿಗೂ ದೂರವಾಗಬಾರದು. ನೆನಪು ಮಾಡುವುದರಲ್ಲಿ. 'ವಿದ್ಯಾಭ್ಯಾಸ ಮಾಡುವುದರಲ್ಲಿ ಮನಸ್ಸಾಗದಿದ್ದರೂ ಜಬರ್ದಸ್ತಿಯಿಂದಾದರೂ ಕೇಳುತ್ತಿರಿ. ಯೋಗವನ್ನು ಇಡಿ. ಸರಿಯಾಗಿಬಿಡುತ್ತದೆ ಏಕೆಂದರೆ ಮಾಯೆಯು ಪ್ರಯತ್ನಿಸುತ್ತಿರುತ್ತದೆ. ಇವರು ಸ್ವಲ್ಪವಾದರೂ ದೂರವಾಗಿಬಿಟ್ಟರೆ ನಾನು ಇವರ ಬಳಿ ಹೋಗೋಣ ಎಂದು ಪ್ರಯತ್ನಿಸುತ್ತಿರುತ್ತದೆ ಆದ್ದರಿಂದ ಎಂದಿಗೂ ದೂರ ಮಾಡಿಕೊಳ್ಳಬಾರದು ಹಾಗೂ ನಿಯಮಗಳನ್ನೆಂದಿಗೂ ಬಿಡಬಾರದು ತಮ್ಮ ವಿದ್ಯಾಭ್ಯಾಸ, ಅಮೃತವೇಳೆ, ಸೇವೆಯ ದಿನಚರಿಯೇನೆಲ್ಲಾ ಇದೆಯೋ ಅದರಲ್ಲಿ ಮನಸ್ಸಾಗದಿರಬಹುದು ಆದರೆ ದಿನಚರಿಯಲ್ಲಿ ಸ್ವಲ್ಪವೂ ತಪ್ಪಬಾರದು. ಭಾರತದಲ್ಲಿ ಹೇಳುತ್ತಾರೆ- ಕಾಯಿದೆಯನುಸಾರ ಎಷ್ಟಿರುತ್ತೀರಿ ಅಷ್ಟು ಲಾಭವಾಗುವುದು, ಅಂದಮೇಲೆ ಇಲ್ಲಿ ಯಾವ ನಿಯಮಗಳಿವೆಯೋ

ಅದನ್ನೆಂದಿಗೂ ತಪ್ಪಿಸಬಾರದು. ನೋಡಿ. ತಮ್ಮ ಭಕ್ತರು ಈಗಿನವರೆಗೂ ತಮ್ಮ ನಿಯಮಗಳನ್ನು ಪಾಲಿಸುತ್ತಿದ್ದಾರೆ. ಭಲೆ ಮಂದಿರದಲ್ಲಿ ಮನಸ್ಸಿಡಲು ಇಷ್ಟವಿಲ್ಲದಿದ್ದರೂ ಅವಶ್ಯವಾಗಿ ಹೋಗುತ್ತಾರೆ. ಇದನ್ನು ಯಾರಿಂದ ಕಲಿತರು? ತಮ್ಮಿಂದ ಕಲಿತಿದ್ದಾರಲ್ಲವೆ! ಸದಾ ಇದೇ ಅನುಭವ ಮಾಡಿರಿ- ಏನೆಲ್ಲಾ ನಿಯಮ ಅಥವಾ ಮರ್ಯಾದೆಗಳನ್ನು ಮಾಡಲಾಗಿದೆ. ಅದನ್ನು ರೂಪಿಸುವವರು ನಾವಾಗಿದ್ದೇವೆ. ತಾವು ಮಾಡಿದ್ದೀರಾ ಅಥವಾ ತಯಾರಾಗಿರುವುದು ಸಿಕ್ಕಿದೆಯೇ? ತಾವು ನಿಯಮ ರೂಪಿಸುವವವರು ನೆನಪಿಲ್ಲವೇ? ಅಮೃತವೇಳೆ ಏಳುವುದು. ಇದು ತಮ್ಮ ಮನಸ್ಸು ಒಪ್ಪುತ್ತದೆ ಅಥವಾ ನಿಯಮ ಮಾಡಲಾಗಿದೆ ಆದ್ದರಿಂದ ಇದರಂತೆ ನಡೆಯುತ್ತೀರಿ. ತಾವೂ ಸ್ವಯಂ ಅನುಭವ ಮಾಡುತ್ತೀರಿ. ನಡೆಯುತ್ತೀರಾ ಅಥವಾ ನಿಯಮಗಳನ್ನು ಮಾಡಿದ್ದಾರೆ ಆದ್ದರಿಂದ ನಡೆಯುತ್ತೀರಾ? ತಮ್ಮ ಮನಸ್ಸಿಗೆ ಒಪ್ಪಿಗೆ ಆಗುತ್ತದೆಯಲ್ಲವೆ! ಅಂದಮೇಲೆ ಯಾವುದನ್ನು ಮನಸ್ಸು ಒಪ್ಪುತ್ತದೆಯೋ ಅದನ್ನು ಮನಸ್ಸಿನಲ್ಲಿ ಮಾಡಲಿಲ್ಲ ಅಲ್ಲವೆ! ಅದನ್ನು ಮಾಡಲೇಬೇಕು ಎಂದು ವಿವಶರಾಗಿ ನಡೆಯುತ್ತಿಲ್ಲ ಅಲ್ಲವೆ! ಎಲ್ಲರ ಮನಸ್ಸಿಗೆ ಒಪ್ಪಿಗೆಯಿದೆಯಲ್ಲವೆ? ಏಕೆಂದರೆ ಯಾವುದನ್ನು ಖುಷಿಯಿಂದ ಮಾಡಲಾಗುವುದೋ ಅದರಲ್ಲಿ ಬಂಧನವೆಸುವುದಿಲ್ಲ. ಇಲ್ಲಿ ತಂದೆಯವರು ಆದಿ-ಮಧ್ಯ-ಅಂತ್ಯ ಮೂರೂ ಕಾಲಗಳ ಜ್ಞಾನವನ್ನು ಕೊಟ್ಟಿದ್ದಾರೆ. ಏನೇ ಮಾಡುತ್ತೀರಿ ಅದರ ಮೂರೂ ಕಾಲಗಳನ್ನು ತಿಳಿದುಕೊಂಡು ಮತ್ತು ಅದೇ ಖುಷಿಯಿಂದ ಮಾಡುತ್ತೀರಿ. ತಾವು ಕಮಾಲ್ ಮಾಡುವಂತಹ ಮಕ್ಕಳೆಂದು ತಂದೆಯು ನೋಡುತ್ತಾರೆ. ತಂದೆಯೊಂದಿಗಿನ ಪ್ರೀತಿ ಅಟೂಟವಾಗಿದೆ ಆದ್ದರಿಂದ ಯಾವುದೇ ಅಂತಹ ಸಂದರ್ಭವಿದ್ದರೂ ಹಾರುತ್ತಿರುತ್ತಾರೆ. ತಂದೆಯೊಂದಿಗಿನ ಪ್ರೀತಿಯಲ್ಲಿ ಎಲ್ಲರೂ ಫುಲ್ ಪಾಸ್ ಆಗಿದ್ದೀರಿ. ವಿದ್ಯೆಯಲ್ಲಿ ನಂಬರ್‌ವಾರ್ ಆಗಿರಬಹುದು ಆದರೆ ಪ್ರೀತಿಯಲ್ಲಿ ನಂಬರ್‌ವನ್. ಸೇವೆಯನ್ನೂ ಚೆನ್ನಾಗಿ ಮಾಡುತ್ತಾರೆ ಆದರೆ ಕೆಲವೊಮ್ಮೆ ಸ್ವಲ್ಪ ಆಟವನ್ನೂ ತೋರಿಸುತ್ತಾರೆ. ಹೇಗೆ ತಂದೆಯೊಂದಿಗೆ ನಂಬರ್‌ವನ್ ಪ್ರೀತಿಯಿದೆ. ಅದೇರೀತಿ ಮುರುಳಿಯೊಂದಿಗೂ ಪ್ರೀತಿಯಿದೆಯೇ? ಜ್ಞಾನದಲ್ಲಿ ಯಾವಾಗಿನಿಂದ ಬಂದಿದ್ದೀರಿ ಆಗಿನಿಂದ ಎಷ್ಟು ಮುರಳಿಗಳನ್ನು ಮಿಸ್ ಮಾಡಿರಬಹುದು? ಕೆಲವೊಮ್ಮೆ ಯಾವುದಾದರೂ ಅಂತಹ ಕಾರಣದಿಂದ ಕ್ಲಾಸ್ ಮಿಸ್ ಮಾಡಿದ್ದೀರಾ? ಹೇಗೆ ತಂದೆಯನ್ನು ನೆನಪು ಮಾಡುವುದನ್ನು ಮಿಸ್ ಮಾಡಲು ಸಾಧ್ಯವಿಲ್ಲ. ಹಾಗೆಯೇ ವಿದ್ಯೆಯೂ(ಮುರುಳಿ) ಮಿಸ್ ಆಗಬಾರದು. ಇದರಲ್ಲಿಯೂ ನಂಬರ್‌ವನ್ ಆಗಬೇಕು. ತಂದೆಯ ರೂಪದಲ್ಲಿ ನೆನಪು, ಶಿಕ್ಷಕನ ರೂಪದಲ್ಲಿ ವಿದ್ಯೆ ಹಾಗೂ ಸದ್ಗುರುವಿನ ರೂಪದಲ್ಲಿ ಪ್ರಾಪ್ತಿಯಾಗಿರುವ ವರದಾನಗಳನ್ನು ಕಾರ್ಯದಲ್ಲಿ ಉಪಯೋಗಿಸುವುದು- ಈ ಮೂರರಲ್ಲಿಯೂ ನಂಬರ್‌ವನ್ ಆಗಬೇಕು. ವರದಾನವಂತು ಎಲ್ಲರಿಗೂ ಸಿಕ್ಕಿದೆಯಲ್ಲವೆ ಆದರೆ ಸಮಯದಲ್ಲಿ ಅದನ್ನು ಉಪಯೋಗಿಸಬೇಕು, ಇದಕ್ಕೆ ಹೇಳಲಾಗುತ್ತದೆ- ವರದಾನದಿಂದ ಲಾಭ ಪಡೆಯುವುದು. ಅಂದಮೇಲೆ ಈ ಮೂರೂ ಮಾತುಗಳ ಪರಿಶೀಲನೆ ಮಾಡಬೇಕು- ಆದಿಯಿಂದ ಈಗಿನವರೆಗೂ ಮೂರು ಮಾತುಗಳಲ್ಲಿಯೂ ಎಷ್ಟು ಪಾಸ್ ಆಗಿದ್ದೀರಿ. ಅಷ್ಟು ವಿಜಯ ಮಾಲೆಯ ಮಣಿಯಾಗುವಿರಿ. ಒಳ್ಳೆಯದು-

ಬಾಪ್‌ದಾದಾರವರು ಮಕ್ಕಳ ನಿಶ್ಚಯ ಹಾಗೂ ಒಲವನ್ನು ನೋಡುತ್ತಾ ಖುಷಿಯಾಗಿದ್ದಾರೆ. ಬಾಪ್ ದಾದಾರವರು ಒಬ್ಬೊಬ್ಬರ ವಿಶೇಷತೆಯನ್ನು ನೋಡುತ್ತಿದ್ದಾರೆ. ಎಷ್ಟೊಂದು ಪ್ರೀತಿಯಿಂದ ಮುಂದುವರೆಯುತ್ತಿದ್ದಾರೆ. ಪರಿಶ್ರಮವನ್ನು ಪರಿಶ್ರಮವೆಂದು ತಿಳಿಯುತ್ತಿಲ್ಲ, ಪ್ರೀತಿಯಿಂದ ನಡೆಯುತ್ತಿದ್ದಾರೆ - ಇದನ್ನು ನೋಡಿ ಖುಷಿಯಾಗುತ್ತದೆ. ಒಬ್ಬೊಬ್ಬರ ವಿಶೇಷತೆಯ ಪಟ್ಟಿಯೂ ಸಹ ಬಾಪ್‌ದಾದಾರವರ ಬಳಿಯಿದೆ. ತಿಳಿಯಿತೆ? ಒಳ್ಳೆಯದು!

**ವಿದಾಯಿಯ ಸಮಯದಲ್ಲಿ:-** ಇಂದು ಬಾಪ್‌ದಾದಾರವರ ಹಾಗೂ ಅನೇಕ ಮಕ್ಕಳ ಜನ್ಮ ದಿನದ ಪ್ರಯುಕ್ತ ಪದಮದಷ್ಟು ಶುಭಾಷಯಗಳು. ನಾಲ್ಕೂ ಕಡೆಯಲ್ಲಿರುವ ಮಕ್ಕಳ ಜನ್ಮದಿನದ ಪ್ರಯುಕ್ತ ಪದಮದಷ್ಟು ಶುಭಾಷಯಗಳು. ನಾಲ್ಕೂ ಕಡೆಯಲ್ಲಿರುವ ಮಕ್ಕಳ ಹೃದಯದ ನೆನಪು- ಪ್ರೀತಿ ಹಾಗೂ ಜೊತೆ-ಜೊತೆಗೆ ಸ್ಥೂಲ ನೆನಪಾರ್ಥದ ಸ್ನೇಹತುಂಬಿದ ಪತ್ರ ಹಾಗೂ ಕಾರ್ಡುಗಳ ಶುಭಾಷಯಗಳನ್ನು ಪಡೆದಿದ್ದೇವೆ. ಎಲ್ಲರ ಹೃದಯದ ಧ್ವನಿಯು ತಂದೆಯವರ ಬಳಿ ತಲುಪಿದೆ. ಹೃದಯರಾಮ ತಂದೆಯು ವಿಶಾಲಹೃದಯವಿರುವ ಎಲ್ಲಾ ಮಕ್ಕಳಿಗೂ ವಿಶಾಲ ಹೃದಯದಿಂದ ಬಹಳ-ಬಹಳ ನೆನಪು-ಪ್ರೀತಿಯನ್ನು ಕೊಡುತ್ತಾರೆ. ಪದಮದಷ್ಟು ಎಂದು ಹೇಳುವುದೂ ಸಹ ಮಕ್ಕಳ ಸ್ವಮಾನದ ಮುಂದೆ ಏನೂ ಅಲ್ಲ ಆದ್ದರಿಂದ ಡೈಮಂಡ್ ನೈಟ್‌ನ ಡೈಮಂಡ್ ವರ್ಷದಿಂದ

ಶುಭಾಷಯಗಳು. ಎಲ್ಲರಿಗೂ ನೆನಪು-ಪ್ರೀತಿ ಹಾಗೂ ಸದಾ ಫರಿಶ್ತೆಯಾಗಿ ಹಾರುತ್ತಿರುವುದಕ್ಕಾಗಿ ಶುಭಾಷಯಗಳು. ಒಳ್ಳೆಯದು-ಡೈಮಂಡ್ ಮಾರ್ನಿಂಗ್.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 22-02-1990.

***ಶಿವ ಜಯಂತಿಯ ಪ್ರಯುಕ್ತ ಅವ್ಯಕ್ತ ಬಾಪ್‌ದಾದಾರವರ ಮಹಾವಾಕ್ಯಗಳು.***

ಇಡೀ ಜ್ಞಾನದ ಸಾರವು ಪರಮಾತ್ಮ ಬಿಂದು, ಆತ್ಮ ಬಿಂದು ಹಾಗೂ ಡ್ರಾಮಾ ಬಿಂದು ಅರ್ಥಾಥ್ ರಚನೆಯಲ್ಲಿ ಅಡಗಿದೆ. ಪ್ರಕೃತಿಯ ಪೂರ್ಣ ಆಟವು ಬಿಂದು ಹಾಗೂ ಲೈಟ್, ಜ್ಯೋತಿಯ ಆಟವಾಗಿದೆ. ನೀವು ಉತ್ಸಾಹದಿಂದ ಇದ್ದು ಸೇವೆಯನ್ನು ಮಾಡಿ ಎಲ್ಲರನ್ನೂ ಉತ್ಸಾಹದಲ್ಲಿ ತರಬಹುದು ಮತ್ತು ಉತ್ಸಾಹವೆಂಬುದು ಸಹಯೋಗ, ಧನ ಮತ್ತು ಸಫಲತೆಯನ್ನು ಆಕರ್ಷಿಸುತ್ತದೆ. ಎಂದು ಹೇಳುತ್ತಾ ಶಿವಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಇಡೀ ಜ್ಞಾನದ ಸಾರ ವಾದ ಪರಮಾತ್ಮ ಬಿಂದು, ಆತ್ಮಬಿಂದು ಮತ್ತು ಡ್ರಾಮಾ ಬಿಂದು ಎಂಬ ಮೂರು ಬಿಂದುಗಳ ತಿಲಕವನ್ನು ಧರಿಸಿದ್ದೇನೆ.

2. ನಾನು ಡೈರೆಕ್ಟರ್ ತ್ರಿಮೂರ್ತಿ ಶಿವ ತಂದೆಯ ಸಾಕಾರ ರೂಪದ ಜೊತೆ ನನ್ನ ಜಯಂತಿಯನ್ನು ಆಚರಿಸಿಕೊಂಡಿರುವ ಪದಮಾ ಪದಮ್ ಭಾಗ್ಯಶಾಲಿ.

3. ನಾನು ವಿಶ್ವದಲ್ಲಿ ಸರ್ವಾತ್ಮರ ಪ್ರತಿ ದಯಾ ಹೃದಯದಿಂದ, ವಿಶ್ವಕಲ್ಯಾಣಕಾರಿ ಶುಭ ಭಾವನೆ ಶುಭಕಾಮನೆಯಿಂದ, ವಿಶ್ವದ ಮುಂದೆ ತಂದೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

4. ನಾನು ಸರ್ವಾತ್ಮರಿಗೆ ತಂದೆಯಿಂದ ವಾರಸತ್ವ(ಆಸ್ತಿ)ವನ್ನು ಕೊಡಿಸಿ ಅವರಿಗೆ ಖುಷಿಯ ಹೊಳಪನ್ನು ಅನುಭವ ಮಾಡಿಸಿದ್ದೇನೆ.

5. ನಾನು ಎಷ್ಟೇ ದೊಡ್ಡವರನ್ನಾದರೂ ಪ್ರತಿ ಆತ್ಮನನ್ನು ನೋಡುತ್ತಲೇ ಇವರು ಕೂಡ ತಂದೆಯಿಂದ ಪ್ರಾಪ್ತಿಯ ಬೊಗಸೆಯನ್ನು ತೆಗೆದುಕೊಳ್ಳಬೇಕು ಎಂಬ ಶುಭಕಾಮನೆಯನ್ನು ಇಟ್ಟುಕೊಂಡಿದ್ದೇನೆ.

6. ನಾನು ನನ್ನ ಶುಭ ಸಂಕಲ್ಪದಿಂದ ವಾಯುಮಂಡಲದ ಸೃಷ್ಟಿಯನ್ನು ರಚಿಸುವ ಶ್ರೇಷ್ಠಾತ್ಮ.

7. ನನ್ನ ಶುಭ ಭಾವನೆಯ ಶುಭ ಸಂಕಲ್ಪದಿಂದ ಎಂತಹ ಆತ್ಮನಾದರೂ ಉತ್ಸಾಹದಲ್ಲಿ ಬಂದು ಈ ಪ್ರಪಂಚವನ್ನು ಅತೀತ ಮತ್ತು ಪ್ರಿಯವಾದ ಸ್ಥಾನವಾಗಿ, ಇವರು ಅತೀತವಾದ, ಪ್ರಿಯವಾದ ಫರಿಶ್ತಾ ಎಂದು ಅನುಭವ ಮಾಡಿಕೊಂಡಿದ್ದಾರೆ.

8. ನಾನು ಯಾವ ಸ್ಥೂಲ ಕಾರ್ಯವನ್ನು ಮಾಡುತ್ತಿದ್ದರೂ, ವಾಣಿಯಿಂದ ಮಾಡುತ್ತಿದ್ದರೂ, ಸಂಕಲ್ಪದಿಂದ ಮಾಡುತ್ತಿದ್ದರೂ, ಪ್ರತಿ ಕ್ಷಣ, ಪ್ರತಿ ಕರ್ಮ, ಪ್ರತಿ ಮಾತು ಉತ್ಸಾಹದಲ್ಲಿದ್ದು ಮಾಡುತ್ತಾ ಎಲ್ಲರಿಗೂ ಉತ್ಸಾಹವನ್ನು ಕೊಡಿಸಿದ್ದೇನೆ.

9. ನಾನು ಉತ್ಸಾಹದಿಂದ ಇರುತ್ತಾ ಉತ್ಸವವೆಂಬ ಭಾವನೆಯೊಂದಿಗೆ ಸೇವೆಯನ್ನು ಮಾಡುತ್ತಾ ಎಲ್ಲರಿಗೂ ಉತ್ಸಾಹ ಕೊಟ್ಟಿದ್ದೇನೆ.

10. ನಾನು ಸೇವೆಯ ಉತ್ಸಾಹದಿಂದ ಸಹಯೋಗವನ್ನು, ಧನವನ್ನು, ಸಫಲತೆಯನ್ನು ಆಕರ್ಷಿಸಿದ್ದೇನೆ.

11. ನಾನು ಉತ್ಸಾಹದಿಂದ ಬಲಹೀನ ಸಂಸ್ಕಾರದ ಪ್ರಭಾವವನ್ನು ಕೂಡ ಉತ್ಸಾಹದಲ್ಲಿ ಪರಿವರ್ತನೆ ಮಾಡಿದ್ದೇನೆ.

12. ನಾನು ಸಂಸ್ಕಾರಗಳ ಮಿಲನದಿಂದ ಸಂಪೂರ್ಣತೆಯನ್ನು ಸಮೀಪಕ್ಕೆ ತಂದಿದ್ದೇನೆ.

13. ನಾನು ನನ್ನ ಜಡ ಚಿತ್ರದಿಂದಲೂ ಅನ್ಯರಿಗೆ ಉತ್ಸಾಹವನ್ನು ಧೈರ್ಯವನ್ನು ಕೊಡುವ ಉತ್ಸಾಹ ಸ್ವರೂಪ.